# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 723 (929) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ |
| ಉತ್ತರಿಸುವ ದಿನಾಂಕ | : | 24-08-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 1213 ಮೆಟ್ರಿಕ್ ಪೂರ್ವ ಮತ್ತು 731 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಸೇರಿದಂತೆ ಒಟ್ಟಾರೆ 1,944 ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದ್ದು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ) | ಸದರಿ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕೊರತೆ ನಿವಾರಿಸಲು ತೆಗೆದುಕೊಂಡ ಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ಜಿಲ್ಲೆಗಳಿಂದ ಸಲ್ಲಿಕೆಯಾದ ಬೇಡಿಕೆಯನುಗುಣವಾಗಿ ರಾಜ್ಯವಲಯದಿಂದ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗಿರುತ್ತದೆ.<br><br>2026-27ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-181 ರ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ಟೂ ಟಯರ್ ಕಾಟ್, ಕಾಯರ್ ಮ್ಯಾಟ್ರಸ್, ಸೋಲಾರ್ ವಾಟರ್ ಹೀಟರ್ ಮತ್ತು ಡೈನಿಂಗ್ ಟೇಬಲ್‌ಗಳನ್ನು ರೂ.25.00 ಕೋಟಿಗಳ ವೆಚ್ಚದಲ್ಲಿ ಪೂರೈಸಲು ಜಿಲ್ಲಾವಾರು ಕಾರ್ಯಕ್ರಮದಲ್ಲಿ ಒದಗಿಸಲಾಗಿದ್ದು, ಈ ಬಗ್ಗೆ ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು 2026-27ನೇ ಸಾಲಿಗೆ ಇಲಾಖೆಯ ವಿದ್ಯಾರ್ಥಿ ನಿಲಯಗಳ ಮೂಲಭೂತ ಸೌಕರ್ಯ ಕಲ್ಪಿಸಲು ರಾಜ್ಯ ವಲಯ ವಿವಿಧ ಅಭಿವೃದ್ಧಿ ಯೋಜನೆ ಬಂಡವಾಳ ಲೆಕ್ಕಶೀರ್ಷಿಕೆ:4225-01-796-0-01ರಡಿ ರೂ.85.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ವಿದ್ಯಾರ್ಥಿ ನಿಲಯಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಗಳು ವಿಳಂಬವಾಗುತ್ತಿರುವುದಕ್ಕೆ ಇರುವ ಕಾರಣಗಳು ಯಾವುವು; ಸದರಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು; | ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ 1944 ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಪೈಕಿ, 1711 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳಲ್ಲಿ ಹಾಗೂ 233 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.<br><br>ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1711 ವಿದ್ಯಾರ್ಥಿ ನಿಲಯಗಳ ಕಟ್ಟಡಗಳಲ್ಲಿ ಕಾಲಕಾಲಕ್ಕೆ ಅಗತ್ಯ ದುರಸ್ತಿ/ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಪ್ರತಿ ವರ್ಷ ವಿದ್ಯಾರ್ಥಿ ನಿಲಯಗಳ ದುರಸ್ತಿ/ಉನ್ನತೀಕರಣಕ್ಕಾಗಿ ಸರ್ಕಾರದಿಂದ ಒದಗಿಸಲಾಗುತ್ತಿರುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ) | ಹಲವು ವಿದ್ಯಾರ್ಥಿ ನಿಲಯಗಳಲ್ಲಿ ವಾರ್ಡನ್ ಹಾಗೂ ಸಿಬ್ಬಂದಿ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ, ಸರ್ಕಾರ ಯಾವ ಯಾವ ಕ್ರಮಕೈಗೊಂಡಿದೆ? | ಸರ್ಕಾರದ ಪತ್ರ ಸಂಖ್ಯೆ:ಸಕಇ 787 ಪಕವಿ 2024, ದಿನಾಂಕ:24-06-2025 ರಲ್ಲಿ ವಿದ್ಯಾರ್ಥಿನಿಲಯಗಳ ವಾರ್ಡನ್ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯದ ಜೊತೆಗೆ ಹೆಚ್ಚುವರಿಯಾಗಿ ಒಂದು ವಿದ್ಯಾರ್ಥಿನಿಲಯಕ್ಕೆ ಮಾತ್ರ ಹೆಚ್ಚುವರಿ ಪ್ರಭಾರದಲ್ಲಿರಿಸಲು ಕ್ರಮವಹಿಸುವುದು. ಒಂದು ವೇಳೆ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್‌ಗಳಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಇನ್ನೂ ವಾರ್ಡನ್ ಹುದ್ದೆಗಳು ಖಾಲಿ ಇದ್ದಲ್ಲಿ, ಸಮನಾಂತರ ವೇತನ ಶ್ರೇಣಿಯ ಬೇರೆ ಇಲಾಖೆಯ ಕಾರ್ಯಭಾರ ಕಡಿಮೆ ಇರುವ ನೌಕರರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಲು ನಿರ್ದೇಶಿಸಲಾಗಿರುತ್ತದೆ.<br><br>ಆಯುಕ್ತರ ಕಛೇರಿ ಸುತ್ತೋಲೆ ಸಂ:ಸಕಇ/ ಸಿಬ್ಬಂದಿ-8/ಸಿಆರ್-50/2023-24, ದಿನಾಂಕ: 08-08-2024 ರಲ್ಲಿ ಹತ್ತಿರದ ವಿದ್ಯಾರ್ಥಿ ನಿಲಯಗಳಲ್ಲಿನ ವಾರ್ಡನ್/ಜೂನಿಯರ್ ವಾರ್ಡನ್‌ಗಳನ್ನು ಹೆಚ್ಚುವರಿ ಪ್ರಭಾರ ಅಥವಾ ಸ್ವತಂತ್ರ ಪ್ರಭಾರದಲ್ಲಿರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳಿಗೆ ಎದುರಾಗಿ ಹೊರಸಂಪನ್ಮೂಲ ಏಜೆನ್ಸಿ ಮುಖೇನ ಸಿಬ್ಬಂದಿಗಳ ಸೇವೆಯನ್ನು ಪಡೆದು ವಿದ್ಯಾರ್ಥಿ ನಿಲಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br><br>ಅಲ್ಲದೇ **ವಾರ್ಡನ್** ಹುದ್ದೆಗೆ ಸಂಬಂಧಿಸಿದಂತೆ ಉಳಿಕೆ ಮೂಲ ವೃಂದದ **325** ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ **25** ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ದಿನಾಂಕ:30.06.2026 ರಂದು ಆಯುಕ್ತರ ಕಛೇರಿಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. |

**ಸಕಇ 788 ಪಕವಿ 2026**

**(ಕೆ.ಹೆಚ್.ಮುನಿಯಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 723(929)ಕ್ಕೆ ಅನುಬಂಧ -1

| ಕ್ರ. ಸಂ | ಜಿಲ್ಲೆಯ ಹೆಸರು | ಮೆಟ್ರಿಕ್ ಪೂರ್ವ ವಿ.ನಿಲಯಗಳು | | | ಮೆಟ್ರಿಕ್ ನಂತರ ವಿ.ನಿಲಯಗಳು | | | ದೀನದಯಾಳ್ ಉಪಾಧ್ಯಾಯ | | | ಒಟ್ಟು |
|---|---|---|---|---|---|---|---|---|---|---|---|
| | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | |
| 1 | ಬಾಗಲಕೋಟೆ | 33 | 11 | 44 | 15 | 10 | 25 | 0 | 0 | 0 | 69 |
| 2 | ಬಳ್ಳಾರಿ | 17 | 5 | 22 | 12 | 6 | 18 | 0 | 0 | 0 | 40 |
| 3 | ಬೆಳಗಾವಿ | 51 | 15 | 66 | 20 | 11 | 31 | 0 | 0 | 0 | 97 |
| 4 | ಬೆಂಗಳೂರು (ಗ್ರಾ) | 18 | 5 | 23 | 5 | 5 | 10 | 0 | 0 | 0 | 33 |
| 5 | ಬೆಂಗಳೂರು (ನ) | 8 | 3 | 11 | 24 | 25 | 49 | 0 | 0 | 0 | 60 |
| 6 | ಬೀದರ್ | 34 | 8 | 42 | 12 | 7 | 19 | 0 | 0 | 0 | 61 |
| 7 | ಚಾಮರಾಜನಗರ | 29 | 11 | 40 | 7 | 9 | 16 | 0 | 0 | 0 | 56 |
| 8 | ಚಿಕ್ಕಬಳ್ಳಾಪುರ | 39 | 10 | 49 | 15 | 8 | 23 | 0 | 0 | 0 | 72 |
| 9 | ಚಿಕ್ಕಮಗಳೂರು | 25 | 12 | 37 | 13 | 9 | 22 | 0 | 0 | 0 | 59 |
| 10 | ಚಿತ್ರದುರ್ಗ | 37 | 15 | 52 | 23 | 18 | 41 | 0 | 0 | 0 | 93 |
| 11 | ದಕ್ಷಿಣ ಕನ್ನಡ | 11 | 8 | 19 | 5 | 6 | 11 | 0 | 0 | 0 | 30 |
| 12 | ದಾವಣಗೆರೆ | 29 | 9 | 38 | 18 | 12 | 30 | 0 | 0 | 0 | 68 |
| 13 | ಧಾರವಾಡ | 9 | 5 | 14 | 14 | 7 | 21 | 1 | 1 | 2 | 37 |
| 14 | ಗದಗ | 21 | 5 | 26 | 12 | 7 | 19 | 0 | 0 | 0 | 45 |
| 15 | ಹಾಸನ | 42 | 17 | 59 | 17 | 17 | 34 | 0 | 0 | 0 | 93 |
| 16 | ಹಾವೇರಿ | 29 | 8 | 37 | 14 | 9 | 23 | 0 | 0 | 0 | 60 |
| 17 | ಕಲಬುರಗಿ | 62 | 10 | 72 | 22 | 14 | 36 | 1 | 1 | 2 | 110 |
| 18 | ಕೊಡಗು | 10 | 7 | 17 | 2 | 2 | 4 | 0 | 0 | 0 | 21 |
| 19 | ಕೋಲಾರ | 38 | 14 | 52 | 13 | 6 | 19 | 0 | 0 | 0 | 71 |
| 20 | ಕೊಪ್ಪಳ | 26 | 7 | 33 | 14 | 10 | 24 | 0 | 0 | 0 | 57 |
| 21 | ಮಂಡ್ಯ | 33 | 13 | 46 | 11 | 11 | 22 | 0 | 0 | 0 | 68 |
| 22 | ಮೈಸೂರು | 34 | 11 | 45 | 20 | 20 | 40 | 0 | 0 | 0 | 85 |
| 23 | ರಾಯಚೂರು | 35 | 11 | 46 | 18 | 13 | 31 | 0 | 0 | 0 | 77 |
| 24 | ರಾಮನಗರ | 28 | 9 | 37 | 7 | 6 | 13 | 0 | 0 | 0 | 50 |
| 25 | ಶಿವಮೊಗ್ಗ | 35 | 14 | 49 | 15 | 15 | 30 | 0 | 0 | 0 | 79 |
| 26 | ತುಮಕೂರು | 49 | 13 | 62 | 25 | 16 | 41 | 0 | 0 | 0 | 103 |
| 27 | ಉಡುಪಿ | 9 | 6 | 15 | 4 | 4 | 8 | 0 | 0 | 0 | 23 |
| 28 | ಉತ್ತರಕನ್ನಡ | 17 | 9 | 26 | 5 | 2 | 7 | 0 | 0 | 0 | 33 |
| 29 | ವಿಜಯನಗರ | 29 | 10 | 39 | 17 | 7 | 24 | 0 | 0 | 0 | 63 |
| 30 | ವಿಜಯಪುರ | 46 | 11 | 57 | 12 | 9 | 21 | 0 | 0 | 0 | 78 |
| 31 | ಯಾದಗಿರಿ | 32 | 6 | 38 | 11 | 4 | 15 | 0 | 0 | 0 | 53 |
| | **ಒಟ್ಟು** | **915** | **298** | **1213** | **422** | **305** | **727** | **2** | **2** | **4** | **1944** |

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

Scanned with OKEN Scanner